**OS 185/2021**
**DW1**

ದಿನಾಂಕ:02.02.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ಶ್ರೀ. ಎಂ ಆರ್. ವಕೀಲರಿಂದಃ

ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ದಾಖಲಾತಿಗಳನ್ನು ನೋಂದಾಣಿ ಮಾಡಿಸಿ ಅಲ್ಲದೇ ದಾಖಲಾತಿಗಳನ್ನು ಬರೆದುಕೊಡುವ, ಬರೆಸಿಕೊಳ್ಳುವ ವ್ಯವಹಾರದ ಬಗ್ಗೆ ಮಾಹಿತಿ ಇದೆ. ಇತ್ತೀಚಿನ ಚನ್ನಪಟ್ಟಣ ಬಿ ಎಂ ರಸ್ತೆ ಇಂಡಿಯನ್ ಪೆಟ್ರೋಲ್ ಬಾಂಕ್ ಎದುರು ಕರ್ಮಾಷಿಯಲ್ ಕಟ್ಟಡ ಕಟ್ಟಿದ್ದೀರ ಎಂದರೇ ಜಂಟಿ ಹೆಸರಿನಲ್ಲಿರುತ್ತದೆ. 35 ಲಕ್ಷ ವೆಚ್ಚ ಮಾಡಿ ಆ ಕಟ್ಟಡವನ್ನು ಕಟ್ಟಿದ್ದೇನೆ. 2 ಕೋಟಿ ಕ್ಕಿಂತಲೂ ಹೆಚ್ಚಾಗಿ ಮಾಡಿ ಕಟ್ಟಿದ್ದೇನೆ ಎಂದರೆ ಇಲ್ಲ. ವ್ಯವಹಾರ ಮತ್ತು ಕಟ್ಟಡ ಸೇರಿ 2 ಕೋಟಿ ವೆಚ್ಚ ಆಗಿರುತ್ತದೆ. ಆ 2 ಕೋಟಿ ವ್ಯವಹಾರ ಮಾಡಲು ಬ್ಯಾಂಕ್ ನಲ್ಲಿ ಸಾಲ ಹಾಗೂ ಸೈಟನ್ನು ಮಾರಾಟ ಮಾಡಿದ್ದೇನೆ ಎಂದೆರ ಹೌದು.

2. ಡಿಸೆಂಬರ್ 2020 ರಲ್ಲಿ ಕೋವಿಡ್ ಕಾಯಿಲೆ ಇದ್ದು ಆ ಸಮಯದಲ್ಲಿ ಹಣಕಾಸಿನ ತೊಂದರೆ ಇತ್ತು ಎಂದರೇ ಇಲ್ಲ. ವಾದಿಗೆ 20ಲಕ್ಷಕ್ಕೆ ಶೇಕಡ 2 ರಷ್ಟು ಬಡ್ಡಿ ಪಾವತಿ ಮಾಡಿದ್ದೇನೆ ಎಂದು ತಿಳಿಸಿದ್ದು ಯಾವುದೇ ದಾಖಲೆ ಇದೆಯಾ ಎಂದರೇ ಇಲ್ಲ. ನಗದು ರೂಪದಲ್ಲಿ ಕೊಟ್ಟಿದ್ದೇನೆ. ವಾದಿಗೆ ತಿಂಗಳಿಗೆ 40 ಸಾವಿರ ಬಡ್ಡಿ ಪಾವತಿ ಮಾಡಿದ ಬಗ್ಗೆ ಆದಾಯ ತೆರಿಗೆಯಲ್ಲಿ ತೋರಿಸಿದ್ದೀರ ಎಂದರೆ ಇಲ್ಲ. ವಾದಿಗೆ 20ಲಕ್ಷ ಕೊಡಬೇಕೆಂದು ಆದಾಯ ತೆರಿಗೆಯಲ್ಲಿ ಹೊಣೆಗಾರಿಕೆ ತೋರಿಸಿದ್ದೀರ ಎಂದರೆ ಹೌದು. ನಿಡಿ-7 ರಲ್ಲಿ ಆ ರೀತಿ ಹೊಣೆಗಾರಿಕೆಯನ್ನು ಎಲ್ಲಿ ತೋರಿಸಿದ್ದೀರ ಎಂದು ಹೇಳಬಹುದ ಎಂದರೆ ಇಲ್ಲ. ವಾದಿಯಿಂದ 20 ಲಕ್ಷ ಸಾಲ ಪಡೆದಿದ್ದೇ ಆದರೆ ದಾವಾ ಸ್ವತ್ತನ್ನು

ಅಡಮಾನ ಮಾಡಿಕೊಳ್ಳಲು ತೊಂದರೆ ಇತ್ತ ಎಂದರೇ ನಂಬಿಕೆಯಲ್ಲಿ ಹಣಕೋಸ್ಕರ ಬರೆದು ಕೊಟ್ಟಿದ್ದೆ. ಸಾಮಾನ್ಯವಾಗಿ ಹಣ ಪಡೆದುಕೊಳ್ಳಬೇಕಾದರೆ ಸ್ವತ್ತನ್ನು ಅಡಮಾನ ಮಾಡಿಕೊಳ್ಳುತ್ತಾರೆ ಅಥವಾ ಚೆಕ್ ಪಡೆದುಕೊಳ್ಳುತ್ತಾರೆ ಅಥವಾ ಮನಿ ಅಂಗ್ರಿಮೆಂಟ್ ಮಾಡಿಕೊಳ್ಳುತ್ತಾರೆ ಎಂದರೆ ಹೌದು.

**3.** ನಿಮ್ಮ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತನ್ನು **37** ಲಕ್ಷ ಅಡಮಾನ ಇಟ್ಟಿದ್ದೇನೆ ಎಂದು ತಿಳಿಸಿದ್ದು ಅದಕ್ಕೆ ದಾಖಲೆ ನೀಡಿದ್ದೀರ ಎಂದರೆ ಹೌದು. ಆದರೆ **37** ಲಕ್ಷ ಅಲ್ಲ **3** ಲಕ್ಷದ **70** ಸಾವಿರ. ನಿಡಿ-**7** **2023-24, 2024-25** ಅವಧಿಗೆ ಸೇರಿದೆ ಎಂದರೇ ಹೌದು. **2020-21, 2022-23** ರ ಆದಾಯ ತೆರಿಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ತಾನು ಹಾಜರುಪಡಿಸಿದ ದಾಖಲೆಯನ್ನು ನೋಡಿ ಸದರಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದು ಉತ್ತರಿಸಿರುತ್ತಾರೆ. **2020** ರಲ್ಲಿ ದಾವಾ ಸ್ವತ್ತು ಗಳ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಎಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೇ ಹೌದು. ದಾವಾ ಸ್ವತ್ತನ್ನು ಭೂ ಪರಿವರ್ತನೆ ಮಾಡಿಕೊಂಡು ಸಂಬಂದ ಪಟ್ಟ ಇಲಾಖೇಯಿಂದ ಪರಿವಾನಿಗೆಯನ್ನು ಪಡೆದು ಮನೆಯನ್ನು ಕಟ್ಟಿದ್ದೇನೆ.

**4.** ನಿಡಿ-**3** ರಲ್ಲಿ ದಾವಾ ಸ್ವತ್ತು ತರಿ ಜಮೀನು ಎಂದು ತೋರಿಸಿದ್ದಾರೆ ಎಂದರೆ ಹೌದು. ಆದರೆ ಅದು ಪ್ರತಿವರ್ಷ ಬದಲಾವಣೆಯಾಗುತ್ತದೆ. ನಿಡಿ-**3** ರಲ್ಲಿ ಮಾವಿನ ಮರ, ಬೇವಿನ ಮರ, ಇತರೆ ಬೆಲೆ ಬಾಳುವ ಮರಗಳನ್ನು ತೋರಿಸಿಲ್ಲ ಎಂದರೇ ಹೌದು. ಆದರೆ ಬೇರೆ ಪಹಣಿ ಪತ್ರಿಕೆಯಲ್ಲಿ ತೋರಿಸಿದ್ದಾರೆ. ಸಾಕ್ಷಿ ನಿಡಿ-**16** ನ್ನು ತೋರಿಸಿ ಅದರಲ್ಲಿ ಎಡಗಡೆ ಮನೆ ಶೀಥಿಲವಾಗಿದೆ ಎಂದರೇ ಇಲ್ಲ. ಅದು ಪಂಪ್ ಹೌಸ್ ಎಂದರೆ ಸರಿ. ನಿಡಿ-**16** ರಲ್ಲಿ ಬಲಗಡೆ ಇರುವ ಶೀಟಿ ನ ಮನೆ **2020** ರ ಇಚೆಗೆ ಕಟ್ಟಿದ ಮನೆ ಎಂದರೆ ಸರಿಯಲ್ಲ. ನಿಡಿ-**1** ರಲ್ಲಿ ಮರ ಮತ್ತು ಮನೆಗಳು ಇರುವ ಬಗ್ಗೆ

ತಿಳಿಸಿಲ್ಲ ಎಂದರೇ ಹೌದು. ನಿಡಿ-**13** ರಲ್ಲಿ ಮನೆ ಮತ್ತು ಶೆಡ್ಡು ಕಾಣುತ್ತದೆಯೇ ಎಂದರೇ ಸಾಕ್ಷಿ ನಿಡಿ-**13** ರಲ್ಲಿರು ಒಂದು ಭಾಗವನ್ನು ತೋರಿಸಿ ಮನೆ ಎಂದು ಗುರುತಿಸಿರುತ್ತಾರೆ. ಆ ಭಾಗವನ್ನು ನಿಡಿ-**13(**ಎ**)** ಎಂದು ಗುರುತಿಸಲಾಯಿತು. ನಾನು ಹಾಜರು ಪಡಿಸಿರುವ ಪೋಟೋ ಮತ್ತು ಸಿಡಿ ದಾವಾ ಸ್ವತ್ತಿಗೆ ಸಂಬಂದಪಟ್ಟಿದಲ್ಲ , ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ದಾವಾ ಸ್ವತ್ತ ನನ್ನ ಸ್ವಂತ ಸ್ವತ್ತು ಎಂದರೆ ಹೌದು. ಆದ್ದರಿಂದ ನನ್ನ ಕುಟುಂಬದವರಿಗೆ ಮತ್ತು ಬೇರೆಯವರಿಗೆ ಯಾವುದೇ ಹಕ್ಕು ಇಲ್ಲ ಎಂದರೇ ಎಲ್ಲಾರು ಜೊತೆಯಲ್ಲಿ ವಾಸ ಇದ್ದೇವು.

**5.** ನಿಡಿ-**4** ಮತ್ತು **5** ರಲ್ಲಿ ಮನೆ ಯಾವ ಊರಿನಲ್ಲಿ ನಮೂದು ಇದೆ ಎಂದರೆ ಇಲ್ಲ. ಆದರೆ ಸುಳ್ಳೇರಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತದೆ. ನಿಡಿ-**4** ಮತ್ತು **5** ಕ್ಕೂ ಮತ್ತು ದಾವಾ ಸ್ವತ್ತಿಗೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಬ್ಯಾಂಕಿನಿಂದ ಸಾಲ ಪಡೆಯಬೇಕಾದರೆ ಅಂಗ್ರಿಮೆಂಟ್ ಬರೆದುಕೊಡುತ್ತೇವೆ. ದಾವಾ ಸ್ವತ್ತು **2** ಕೋಟಿ ಬೆಲೆ ಬಾಳುತ್ತಿತ್ತು ಎಂದು ಸುಳ್ಳು ಹೇಳಿದ್ದೆನೆ ಎಂದರೇ ಇಲ್ಲ. ಕರಾರು ಬರೆದುಕೊಡುವ ಕಾಲಕ್ಕೆ ದಾವಾ ಸ್ವತ್ತು ಬೆಲೆ **30** ಲಕ್ಷಕ್ಕೂ ಕಡಿಮೆ ಇತ್ತು ಎಂದರೇ ಸರಿಯಲ್ಲ. ಆ ಸಮಯದಲ್ಲಿ ಕೋವಿಡ್ ಇದ್ದು ದಾವಾ ಸ್ವತ್ತನ್ನು ಯಾರು ಖರೀದಿ ಮಾಡದ ಕಾರಣ ನನಗೆ ಹಣದ ಅವಶ್ಯಕತೆ ಇದ್ದ ಕಾರಣ ವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-**1** ರಲ್ಲಿ ಸಾಲದ ಭದ್ರತೆಗಾಗಿ ಕರಾರು ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳಿದ್ದೀರ ಎಂದರೆ ಇಲ್ಲ. ಅದೇ ರೀತಿ ಎಸ್ ಬಿ ಐ ಬ್ಯಾಂಕಿನಲ್ಲಿ ದಾವಾ ಸ್ವತ್ತನ್ನು ಅಡಮಾನ ಇಟ್ಟು **3** ಲಕ್ಷದ **70** ಸಾವಿರ ಸಾಲ ಪಡೆದುಕೊಂಡಿದ್ದೇನೆ ಎಂದು ತಿಳಿಸಿದ್ದೇನೆ. ಸಾಕ್ಷಿ ಮುಂದುವರೆದು ನಿಪಿ-**1** ರಲ್ಲಿ ಇರುವುದಲ್ಲಿ ಪಹಣಿ, ಎಂ ಆರ್ ಮತ್ತು ಇಸಿ ಯಲ್ಲಿ ಇರುತ್ತದೆ ಎಂದು ಹೇಳುತ್ತಾರೆ.

**6.** ನಿಡಿ-**2** ರಲ್ಲಿ ನನ್ನ ತಾಯಿಯ ಹೆಸರು ಇರುವುದಿಲ್ಲ. ದಾವಾ ಸ್ವತ್ತಿನ ಮನೆಯಲ್ಲಿ ನನ್ನ ಕುಟುಂಬದವರು ವಾಸವಿದ್ದಾರೆ ಎಂದು ತೋರಿಸಲು ಪಡಿತರ ಚೀಟಿ ಅಥವಾ ಇತರೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತನ್ನು ಬಿಟ್ಟು ಬೇರೆ ಯಾವುದೇ ಸ್ವತ್ತು ಇಲ್ಲ ಎಂದು ತಿಳಿಸಿದ್ದು ಅದನ್ನು ನಿಡಿ-**7** ರಲ್ಲಿ ಘೋಷಣೆ ಮಾಡಿಕೊಂಡಿದ್ದೀರ ಎಂದರೆ ಇಲ್ಲ. ಬನ್ನಿಗಪ್ಪೆಯಲ್ಲಿ ನನಗೆ ಆಸ್ತಿ ಇರುವುದಿಲ್ಲ. ಕರ್ಮಾಷಿಯಲ್ ಕಟ್ಟಡದಲ್ಲಿ ವಾಸದ ಮನೆ ಇದೆ ಎಂದರೆ ಇವಾಗ ಇದೆ. ದಾವಾ ಸ್ವತ್ತಿನಲ್ಲಿ ವಾಸ ಇದ್ದೇವೆ ಎಂದು ತಿಳಿಸಿದ್ದು ಗೃಹ ಜ್ಯೋತಿ ದಾಖಲೆ ಹಾಜರುಪಡಿಸಿದ್ದೀರ ಎಂದರೆ ಇಲ್ಲ.

**7.** ದಾವಾ ಸ್ವತ್ತನ್ನು ಕುಟುಂಬದ ನಿರ್ವಹಣೆಗೆ, ಕರ್ಮಾಷಿಯಲ್ ಕಟ್ಟಡವನ್ನು ಕಟ್ಟಲು ತುರ್ತಾಗಿ ಹಣ ಬೇಕಾಗಿದ್ದ ಕಾರಣ ವಾದಿಗೆ ಕ್ರಯ ಕರಾರು ಮಾಡಿಕೊಂಡಿದ್ದೆ ಎಂದರೆ ಇಲ್ಲ. ಆ ಸಮಯದಲ್ಲಿ ನಾನು ಯಾವುದೇ ಮನೆ ಮಾಡಿರಲಿಲ್ಲ. ದಾವಾ ಸ್ವತ್ತಿನ ಬೆಲೆ **30** ಲಕ್ಷಕ್ಕಿಂತ ಹೆಚ್ಚಾಗಿದ್ದಾರೆ ನೋಂದಾಣಿಧಿಕಾರಿಗಳು ದಾಖಲೆಗಳನ್ನು ನೋಂದಾಣಿ ಮಾಡಿರುತ್ತಿರಲಿಲ್ಲ ಎಂದರೇ ಸಾಕ್ಷಿ ಎಸ್ ಆರ್ ವ್ಯಾಲು ಮೇಲೆ ಮಾಡುತ್ತಾರೆ ಎಂದು ಹೇಳುತ್ತಾರೆ. ದಾವಾ ಸ್ವತ್ತನ್ನು ವಾದಿಗೆ **30** ಲಕ್ಷಕ್ಕೆ ಮಾರಾಟ ಮಾಡಿದ್ದೇನೆ ಎಂದು ಒಪ್ಪಿದ್ದೆನೆ ಎಂದರೇ ಸುಳ್ಳು. ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶಕ್ಕೆ **25** ಲಕ್ಷ ಹಣವನ್ನು ಪಡೆದಿದ್ದು ಬಡ್ಡಿ ವ್ಯವಹಾರಕ್ಕೆ ಅಲ್ಲ ಎಂದರೆ ಸುಳ್ಳು. ಕರಾರಿನಂತೆ ವಾದಿ ಆಗಲು ಮತ್ತು ಈಗಲೂ **5** ಲಕ್ಷ ರೂಗಳನ್ನು  ಕೊಟ್ಟು ಸಿದ್ದರಿದ್ದಾರೆ ಎಂದರೆ ಇಲ್ಲ. ಹಣ ಪಡೆದುಕೊಂಡಿರುವುದಕ್ಕೆ ಕರಾರನ್ನು ಮಾಡಿಕೊಂಡಿದ್ದೇವು. ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ ಕರಾರನ್ನು ಬರೆದುಕೊಟ್ಟಿದ್ದು ಈಗ ಆದರಿಂದ ತಪ್ಪಿ ಸಿಕೊಳ್ಳಲು ಸಾಲ ಪಡೆದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರಿನಂತೆ ಕ್ರಯ ಪತ್ರ ಬರೆದುಕೊಡಲು ಬಾಧ್ಯಸ್ಥ

ಎಂದರೆ ಇಲ್ಲ. ಬಾದ್ಯತೆ ಇದ್ದ ತಪ್ಪಿ ಸಿಕೊಳ್ಳಲು ಸುಳ್ಳು ಲಿಖಿತ ಪತ್ರ, ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**.)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ**.**

**(**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

**(**ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**.)**

**(**ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**. )**